

# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ

**ಗಣಪತಿಗೆ ಆನೆಯ ತಲೆ:** ಸ್ವಾಮಿ ಭೂತೇಶಾನಂದಜಿ ಮಹಾರಾಜರಿಗೆ ಒಮ್ಮೆ ಒಬ್ಬರು ಕೇಳಿದರು: "ಗಣೇಶನಿಗೆ ಏಕೆ ಆನೆಯ ತಲೆ ಉಂಟಾಯಿತು?" ಅದಕ್ಕೆ ಪೂಜ್ಯ ಸ್ವಾಮೀಜಿಯವರು ಒಂದು ಸ್ವಾರಸ್ಯವಾದ ಕಥೆ ಹೇಳಿದರು: "ಪಾಪ, ಗಣೇಶನದ್ದು ಬಹಳ ಅಸಹಾಯಕ ಸ್ಥಿತಿ. ಗಣೇಶನ ಜನ್ಮವಾಗಿದೆ. ಮಗು ನೋಡಲು ಬಹಳ ಸುಂದರವಾಗಿತ್ತು. ದೇವತೆಗಳೆಲ್ಲ ಮಗುವನ್ನು ನೋಡಲು ಬಂದಿದ್ದಾರೆ. ಶನಿದೇವನನ್ನು ಬಿಟ್ಟು ಬೇರೆ ಎಲ್ಲರೂ ಬಂದು ನೋಡಿದರು. ಎಲ್ಲ ದೇವತೆಗಳೂ ಶನಿದೇವನನ್ನು ಕೇಳಿದರು, 'ಹೋಗು, ದುರ್ಗಾಮಾತೆಯ ಮಗುವನ್ನು ಎಲ್ಲರೂ ನೋಡಿಕೊಂಡು ಬಂದಿದ್ದಾರೆ. ನೀನು ಹೋಗಲೇ ಇಲ್ಲವಲ್ಲ. ನೀನು ಹೋಗದಿದ್ದರೆ, ದುರ್ಗಾಮಾತೆಯು ನಿನ್ನ ಮೇಲೆ ಮುನಿಸಿಕೊಳ್ಳುತ್ತಾಳೆ.' "

"ಇದನ್ನು ಕೇಳಿ ಶನಿದೇವನಿಗೆ ಭಯವಾಯಿತು. ಮುಖದ ಮೇಲೆ ಒಂದು ಮುಸುಕು ಹಾಕಿಕೊಂಡು ಮಗುವನ್ನು ನೋಡಲು ಹೋದನು. ಮುಖವನ್ನು ಮುಚ್ಚಿಟ್ಟಿದ್ದು ಏಕೆಂದು ನಿಮಗೆ ಗೊತ್ತಾಗಿರಬೇಕಲ್ಲ? ಶನಿದೃಷ್ಟಿ! ದುರ್ಗಾಮಾತೆ ನೋಡುತ್ತಾಳೆ, ಶನಿ ಬಂದಿದ್ದಾನೆ. ಆದರೆ ಅವನು ಮಗುವನ್ನು ನೋಡುತ್ತಿಲ್ಲ, ಮುಖದ ಮೇಲೊಂದು ಮುಸುಕು ಬೇರೆ. ಆಕೆ ಕೇಳಿದಳು, 'ಏನಪ್ಪ, ನೀನು ಏಕೆ ಹೀಗೆ ಮುಖದ ಮೇಲೆ ಮುಸುಕು ಹಾಕಿಕೊಂಡು ಬಂದಿದ್ದೀಯೆ? ಮಗುವನ್ನು ನೋಡುವುದಿಲ್ಲವೇ?' ಶನಿ ಯೋಚಿಸಿದ, 'ನಾನು ನೋಡುವುದರಿಂದ ದುರ್ಗೆಯ ಮಗುವಿಗೆ ಏನಾದರೂ ಕಷ್ಟ ಬಂದರೆ? ಆಗ ದುರ್ಗಾಮಾತೆ ಕೋಪ ಮಾಡಿಕೊಳ್ಳುತ್ತಾಳಲ್ಲ!' ಏನಾದರೂ ಆಗಲಿ ಎಂದು ನಿಧಾನವಾಗಿ ಕಣ್ಣು ತೆರೆದ. ಅಷ್ಟೇ ಸಾಕಾಯಿತು! ಗಣೇಶನ ತಲೆಯೇ ಹೊರಟುಹೋಯಿತು.

"ಈಗ ದೊಡ್ಡ ಫಜೀತಿಯೇ ಆಗಿಬಿಟ್ಟಿತು. ದುರ್ಗೆಗೆ ಬಹಳ ಕೋಪ ಬಂತು. ರುಂಡವನ್ನು ಕಳೆದುಕೊಂಡ ಮಗು ಇನ್ನೇನು ಸಾಯುವುದರಲ್ಲಿದೆ! ಆಗ ಉಳಿದವರೆಲ್ಲ ಹೇಳಿದರು, 'ಇದರಲ್ಲಿ ಶನಿಯ ಅಪರಾಧ ಏನೂ ಇಲ್ಲ. ಹೀಗೆ ಆಗಬಹುದೆಂದೇ ಶನಿಯು ಮಗುವನ್ನು ನೋಡಲು ಬರಲು ಇಷ್ಟಪಡಲಿಲ್ಲ.' ದುರ್ಗಾಮಾತೆಯು ಶನಿಯನ್ನು ಕ್ಷಮಿಸಿದಳು. ಶನಿ ಹೇಗೋ ಬದುಕಿಕೊಂಡ. ಈಗ ಗಣೇಶನ ಗತಿ ಏನು? ಅವನು ಸಾಮಾನ್ಯ ಮಗುವಲ್ಲ. ಸಾಕ್ಷಾತ್ ದುರ್ಗಾಮಾತೆಯ ಮಗ. ರುಂಡ ಹೋಯಿತೆಂದು ಹಾಗೆಯೇ ಬಿಡಲಾಗುತ್ತದೆಯೇ? ಅಷ್ಟರಲ್ಲಿ ಅಶರೀರವಾಣಿಯೊಂದು ಮೊಳಗಿತು: 'ಬೆಳಿಗ್ಗೆ ಮೊದಲು ಯಾವ ಪ್ರಾಣಿಯು ಉತ್ತರದಿಕ್ಕಿಗೆ ತಲೆಹಾಕಿ ಮಲಗಿರುವುದನ್ನು ನೋಡುತ್ತೀರೋ, ಅದರ ತಲೆ ಕಡಿದುತಂದು ಅಂಟಿಸಿ' ಎಂದು. ಬೆಳಗ್ಗೆ ಎದ್ದುನೋಡಿದಾಗ, ಒಂದು ಆನೆ ಉತ್ತರದಿಕ್ಕಿಗೆ ತಲೆಹಾಕಿ ಮಲಗಿರುವುದನ್ನು ಕಂಡರು. ಅದರ ತಲೆಯನ್ನೇ ಕಡಿದು, ಗಣೇಶನಿಗೆ ಅಂಟಿಸಿದರು.

"ದೇವತೆಗಳೆಲ್ಲ ಹೇಳಿದರು, 'ಇದೇನಾಯಿತು? ಆನೆತಲೆ ಬಂತಲ್ಲಾ?' 'ದೇವತೆಗಳೆಲ್ಲ ಸೇರಿ ತನ್ನ ಮಗನನ್ನು ಅಪಹಾಸ್ಯ ಮಾಡುತ್ತಿದ್ದಾರೆ, ಆ ರೀತಿ ಪರಿಹಾಸ್ಯ ಮಾಡದಂತೆ ಮಾಡುತ್ತೇನೆ' ಎಂದು ದುರ್ಗಾದೇವಿ ಯೋಚಿಸಿದಳು. ಇನ್ನುಮುಂದೆ ಎಲ್ಲ ಪೂಜೆಗಳಿಗಿಂತಲೂ ಗಣೇಶನಿಗೇ ಮೊದಲು ಪೂಜೆ ಸಲ್ಲಬೇಕು ಎಂದು ಕಟ್ಟಪ್ಪಣೆ ಮಾಡಿದಳು. ನಂತರವೇ ಬೇರೆ ದೇವತೆಗಳ ಪೂಜೆ ಎಂದಳು. ಆದ್ದರಿಂದಲೇ ಗಣೇಶನ ಪೂಜೆಯನ್ನು ಪ್ರಥಮವಾಗಿ ಮಾಡಲೇಬೇಕಾಗುತ್ತದೆ."

**ಯಾರು ದೊಡ್ಡ ಜಿಪುಣರು?:** ಒಂದು ಊರಿನಲ್ಲಿ ಇಬ್ಬರು ಬ್ರಾಹ್ಮಣ ಪಂಡಿತರಿದ್ದರು. ಇಬ್ಬರೂ ಅತ್ಯಂತ ಜಿಪುಣರು. ಗೆಳೆಯರಾಗಿದ್ದರೂ, ಒಳಗಿಂದೊಳಗೇ ಒಬ್ಬರಿಗೊಬ್ಬರು ಅಸೂಯೆಪಡುತ್ತಿದ್ದರು. ಎಷ್ಟು ಜಿಪುಣರೆಂದರೆ, ತಾವು ಎಷ್ಟು ಗಳಿಸುತ್ತಿದ್ದಾರೆಂದು ಬೇರೆಯವರಿಗೆ ಹೇಳುತ್ತಿರಲಿಲ್ಲ. ಹಾಗೆಯೇ, 'ಇವರಿಬ್ಬರಲ್ಲಿ ಯಾರು ಹೆಚ್ಚು ಜಿಪುಣರು' ಎನ್ನುವುದನ್ನು ಬೇರೆಯವರಿಗೂ ಕಂಡುಹಿಡಿಯಲು ಆಗುತ್ತಿರಲಿಲ್ಲ. ಒಬ್ಬ ಇನ್ನೊಬ್ಬನನ್ನು 'ಲೋಭಿ' ಎಂದು ಕರೆದರೆ, ಇನ್ನೊಬ್ಬ ಮೊದಲನೆಯವನನ್ನು 'ಲೋಭಿ' ಎಂದು ಕರೆಯುತ್ತಿದ್ದನು. ತಮಾಷೆಯೆಂದರೆ ಇವರಿಬ್ಬರ ನಡುವೆ ಆಗಾಗ ದೀರ್ಘಕಾಲ ವೇದಾಂತ ಚರ್ಚೆ ಬೇರೆ ನಡೆಯುತ್ತಿತ್ತು.

ಹೀಗೆಯೇ ಒಂದು ದಿನ ಎರಡನೆಯ ಪಂಡಿತನು ಸಂಜೆ ಹೊತ್ತು ಮೊದಲನೆಯ ಪಂಡಿತನ ಮನೆಗೆ ಹೋದನು. ಶಾಸ್ತ್ರಗಳ ಮೇಲೆ ತರ್ಕ ಆರಂಭವಾಯಿತು. ಮೊದಲ ಪಂಡಿತನು (ಆತನದ್ದೇ ಆ ಮನೆ), ದೀಪವನ್ನು ಆರಿಸಿ ಹೇಳಿದನು, "ನಾವು ಶಾಸ್ತ್ರಚರ್ಚೆ ಮಾಡುತ್ತಿದ್ದೇವೆ. ದೀಪದ ಎಣ್ಣೆಯನ್ನು ಏಕೆ ವ್ಯರ್ಥವಾಗಿ ಖರ್ಚು ಮಾಡಬೇಕು?" ಅದಕ್ಕೆ ಎರಡನೆಯ ಪಂಡಿತ, "ಹೂಂ" ಎಂದನು. ಚರ್ಚೆ ಮುಂದುವರೆಯಿತು. ಕಡೆಗೆ ಕೆಲವು ಕಾಲದ ನಂತರ ಚರ್ಚೆ ಸಮಾಪ್ತವಾಯಿತು. ಮೊದಲನೆಯ ಪಂಡಿತ ಹೇಳಿದ, "ಸರಿ, ಈಗ ನಾನು ದೀಪ ಉರಿಸುತ್ತೇನೆ."

ಆಗ ಎರಡನೆಯ ಪಂಡಿತ ಹೇಳುತ್ತಾನೆ, "ಸ್ವಲ್ಪ ತಾಳು, ಸ್ವಲ್ಪ ತಾಳು. ನಾನು ಉಟ್ಟಿದ್ದ ಬಟ್ಟೆಯನ್ನು ತೆಗೆದುಹಾಕಿ ಕುಳಿತಿದ್ದೆ. ಇಷ್ಟು ಹೊತ್ತು ಕತ್ತಲಿನಲ್ಲಿ ಶಾಸ್ತ್ರಚರ್ಚೆ ನಡೆಯುತ್ತಿತ್ತಲ್ಲವೇ?! ಹಾಗಾಗಿ ಮೈಮೇಲೆ ಬಟ್ಟೆಯ ಆವಶ್ಯಕತೆ ಇರಲಿಲ್ಲವೆಂದು ಬಟ್ಟೆಯನ್ನು ಬಿಚ್ಚಿ ಬದಿಯಲ್ಲಿ ಇರಿಸಿದ್ದೆ!" ✶